**39ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು**

**ಸಿ.ಸಿ. ನಂ. 2047/2023**

ಸಿಡಬ್ಲ್ಯೂ -1ಪಿಡಬ್ಲ್ಯೂ-1

| | |
|---|---|
| ಸಾಕ್ಷಿದಾರನ ಹೆಸರು | : ಶ್ರಿದೇವಿ |
| ಗಂಡನ ಹೆಸರು | : ಮಂಜುನಾಥ್ |
| ವಯಸ್ಸು | : 36 ವರ್ಷ |
| ಕೆಲಸ | : ಗೃಹಿಣಿ |
| ವಾಸ | : ಮಲ್ಲೇಶ್ವರಂ, ಬೆಂಗಳೂರು |

**ಸಾಕ್ಷಿಯನ್ನು ದಿನಾಂಕಃ05-03-2025ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ**

ಚಾಸಾ-2 ಮತ್ತು 3 ನನ್ನ ತಂದೆ ತಾಯಿ. ಚಾಸಾ-4 ನನ್ನ ಅಣ್ಣ. ಚಾಸಾ-5 ನನ್ನ ಮಗಳು. ಚಾಸಾ-6 ರಿಂದ 11 ಗೊತ್ತು. ಆರೋಪಿ ನನ್ನ ಗಂಡ. ಸಾಕ್ಷಿಗೆ ದೂರು ಮತ್ತು ಪಂಚನಾಮೆಯನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ದೂರನ್ನು **ನಿಪಿ-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ಪಂಚನಾಮೆಯನ್ನು **ನಿಪಿ-2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು.

ದಿಃ 05-03-2007 ರಂದು ನನ್ನ ಮತ್ತು ಆರೋಪಿಯ ಮದುವೆ ತುಮಕೂರಿನ ಶ್ರೀ ಸಿದ್ದಿವಿನಾಯಕ ಸಮುದಾಯ ಭವನದಲ್ಲಿ ಮದುವೆಯಾಗಿರುತ್ತದೆ. ನನಗೆ ತಿಳಿದಿರುವ ಹಾಗೆ ರೂ.5,00,000/- ಹಣ ಮತ್ತು 100 ಗ್ರಾಂ ಚಿನ್ನ, ವಜ್ರದ ಉಂಗುರ

This is a True Copy of the Court Records Online. Authenticated @ districts.ecourtsindia.com/cnr/KABC030033442023/truecopy/order-1.pdf

ವನ್ನು ವರದಕ್ಷಿಣೆಯಾಗಿ ಕೊಟ್ಟು ವೈಭವದಿಂದ ಮದುವೆ ಮಾಡಿಕೊಟ್ಟಿದ್ದರು. ಸಾಕ್ಷಿಯು ತಮ್ಮ ಮದುವೆಯ ಆಮಂತ್ರಣ ಪತ್ರಿಕೆಯನ್ನು ಮತ್ತು ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಆಮಂತ್ರಣ ಪತ್ರಿಕೆಯನ್ನು **ನಿಪಿ-3** ಎಂದು, ಎರಡು ಭಾವ ಚಿತ್ರಗಳನ್ನು ಒಟ್ಟಿಗೆ **ನಿಪಿ-4** ಎಂದು ಗುರುತಿಸಲಾಯಿತು. ಛೌಟ್ರಿ ಬುಕ್ ಮಾಡಿದ ಬಗ್ಗೆ ಎರಡು ರಶೀದಿಗಳನ್ನು **ನಿಪಿ-5 ಮತ್ತು ನಿಪಿ-6** ಎಂದು ಗುರುತಿಸಲಾಯಿತು.

ಮದುವೆಯಾದ ನಂತರ ನಾವು ವಿದ್ಯಾರಣ್ಯಪುರದಲ್ಲಿ ನಾನು ಮತ್ತು ಆರೋಪಿ ವಾಸವಿದ್ದೆವು. 2008 ರಲ್ಲಿ ನನಗೆ ಚಾಸಾ-5 ರವರು ಜನಿಸಿರುತ್ತಾರೆ. ನಂತರ ನಾನು ತಾಯಿ ಮನೆಗೆ ಹೋಗಿದ್ದೆ. ಆ ನಂತರ ನಾವು ವಿದ್ಯಾರಣ್ಯಪುರದಿಂದ ಮಲ್ಲೇಶ್ವರಂ ಗೆ ಸ್ಥಳಾಂತರವಾಗಿದ್ದೆವು.

ನಮಗೆ ಹೆಣ್ಣು ಮಗು ಜನಿಸಿರುವುದು ಆರೋಪಿಗೆ ಇಷ್ಟ ಇರಲಿಲ್ಲ. 2010 ರಲ್ಲಿ ನಾನು ಪುನಃ ಗರ್ಭಿಣಿಯಾಗಿದ್ದೆ. ಆಗ ಸಹಜವಾಗಿ ಗರ್ಭ ಪಾತ ಆಗಿತ್ತು. ಆಗ ಆರೋಪಿಯು ಗರ್ಭ ಪಾತ ಆಗಿರುವುದು ಒಳ್ಳೆಯದು, ಸದರಿ ಮಗು ನನ್ನ ಮಗು ಆಗಿರಲಿಲ್ಲ ಎಂಬ ರೀತಿಯಲ್ಲಿ ಆರೋಪಿಯು ನಡೆದುಕೊಳ್ಳುತ್ತಿದ್ದರು. 2013 ರಲ್ಲಿ ನನಗೆ ಮತ್ತೊಂದು ಹೆಣ್ಣು ಮಗು ಆಗಿತ್ತು. ಸದರಿ ಮಗು ವಿಶೇಷ ಚೇತನ ಮಗುವಾಗಿತ್ತು.

ನನಗೆ ಎರಡೂ ಹೆಣ್ಣು ಮಗು ಜನಿಸಿದ್ದರಿಂದ ಮತ್ತು ಎರಡನೇ ಮಗು ವಿಶೇಷ ಚೇತನವಾಗಿದ್ದರಿಂದ ಆರೋಪಿಯು ತನಗೆ ಗಂಡು ಮಗು ಬೇಕು, ನಾನು ಮತ್ತೊಂದು

This is a True Copy of the Court Records Online. Authenticated @ districts.ecourtsindia.com/cnr/KABC030033442023/truecopy/order-1.pdf

ಮದುವೆಯಾಗುತ್ತೇನೆ ಎಂದು ಹೇಳುತ್ತಿದ್ದರು. 1ನೇ ಆರೋಪಿಗೆ ಅವರ ಅಕ್ಕಂದಿರಾದ ನಾಗರತ್ನ ಮತ್ತು ರಾಧರವರು ಆರೋಪಿಗೆ ಕಿವಿಮಾತುಗಳನ್ನು ಹೇಳಿ, ಕುಮ್ಮಕ್ಕು ನೀಡಿ ಜಗಳ ಅಚ್ಚುತ್ತಿದ್ದರು. ಆ ಇಬ್ಬರು ಅಕ್ಕಂದಿರಿಗೆ ಆರೋಪಿಯು ಆಸ್ತಿಯನ್ನು ದಾನ ಪತ್ರದ ಮೂಲಕ ನೀಡಿರುತ್ತಾರೆ.

**(ಈ ಹಂತದಲ್ಲಿ ಅಭಿಯೋಜಕರು ಕಲಂ 319 ರಡಿಯಲ್ಲಿ ಅರ್ಜಿ ಸಲ್ಲಿಸುವುದಾಗಿ ಹೇಳಿರುವ ಕಾರಣ ಮುಂದುವರೆದ ಮುಖ್ಯವಿಚಾರಣೆಗಾಗಿ ಕಾಲವಕಾಶ ನೀಡಲಾಯಿತು.)**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

(ಸಂದೀಪ್ ಪಾಟಿಲ್)
39ನೇ ಅ. ಮು. ಮ. ದಂ. ನ್ಯಾ

This is a True Copy of the Court Records Online. Authenticated @ districts.ecourtsindia.com/cnr/KABC030033442023/truecopy/order-1.pdf